16. ಕಂಟ್ರಾಕ್ಟುದಾರನು, ಖೈದಿಗಳ ಉಪಯೋಗಾರ್ಥ ತರಕಾರಿಗಳನ್ನು ಒಂದು ಪಾನಿಗೆ 4 ಕಾಸುಗಳ ಮೇರಿಗೆ ಕಾಯಂ ದರದ ಪ್ರಕಾರ ಜೈಲ್ ತೋಟದಿಂದಲೇ ಕೊಳ್ಳುವದಕ್ಕೆ ಬದ್ಧನಾಗಿರತಕ್ಕದ್ದು.

17. ಇನ್ನೂ ಹೆಚ್ಚಿಗೆ ತಪಶೀಲ್‌ಗಳು ಸೂಪರ್‌ಟೆಂಡೆಂಟರವರನ್ನು ಕೇಳಿ ತಿಳಿದುಕೊಳ್ಳಬಹುದು.

18. ಅಡಿಗೆ ಮಾಡುವಲ್ಲಿ ಮಡಿಕೆ ವಡದು ಹೋಗುವದರಿಂದ ಪದಾರ್ಥವೇನಾದರೂ ಅಕಸ್ಮಾತ್ ನಷ್ಟವಾದರೆ ಅದನ್ನು ಕಂಟ್ರಾಕ್ಟುದಾರನೇ ಭರ್ತೀಮಾಡತಕ್ಕದ್ದು.

19. ಹಾಲಿ ಶಿವಮೊಗ್ಗಾ ಜೈಲಿನಲ್ಲಿ 154 ಮಂದಿ ಖೈದಿಗಳಿರುತ್ತಾರೆ ಈ ಸ್ಥಾಲಿನಲ್ಲಿ ಸುಮಾರು 150 ಮಂದಿವರಿಗೂ ಜಾಸ್ತಿಯಾಗಬಹುದು.

20. ಆಹಾರ ದರದ ಪಟ್ಟಿಯನ್ನು 1880ನೇ ಇಸವಿ ಜನವರೀ 10ನೇ ಮಕ್ಕುಮಿನ ಮೈಸೂರು ಗೆಜೆಟ್‌ನಿಂದಲಾಗಲೀ ಶಿವಮೊಗ್ಗಾ ಜೈಲ್ ಸೂಪರ್‌ಟೆಂಡೆಂಟರವರನ್ನು ಕೇಳಿ ಆಗಲೀ ತಿಳಿದುಕೊಳ್ಳಬಹುದು.

ಕೆ. ನಾಗೇಶರಾವ್,
ಶಿವಮೊಗ್ಗಾ ಜೈಲ್ ಸೂಪರ್‌ಟೆಂಡೆಂಟ್.

ದೇವಿ ಇಲಾಖಾ.

ಇಸ್ತಿಹಾರ್‌ನಾಮೆ.

ತಾರೀಖು 1ನೇ ಫಿಬ್ರವರೀ 1887.

ಮೈಸೂರು ಡಿಸ್ಟ್ರಿಕ್ಟ್ ದೇವಿ ಡೆಪ್ಯೂಟಿ ಇನ್‌ಸ್ಪೆಕ್ಟರ್, ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಗಸ್ತು ಮಾಡಿದ ತರುವಾಯ 1887ನೇ ಇಸವಿ ಫಿಬ್ರವರೀ ತಾರೀಖು 15ನೇ ಮಂಗಳವಾರದ ಲಾಗಾಯತು ನಂಜನಗೂಡು ತಾಲ್ಲೂಕು ತರಫ್ ಹೊರಟು ದೇವಿ ಜಕೀಮ್ ಮಾಡಿದ ಕೆಲಸಗಳನ್ನ ತನಖೀ ಮಾಡುವ ಬಗ್ಯೂ, ಯಿಷ್ಟವುಳ್ಳವರಿಗೆ ಕೂಡ್ಲೇ ದೇವಿ ಹಕೀಮನ ಜೊತೆಯಲ್ಲಿ ಖುದ್ದು ದೇವಿ ಹಾಕುವ ಬಗ್ಯೂ ಸಹ ಈ ಕೆಳಗೆ ನಮೂದಾಗುವ ಹೋಬಳೀಗಳಿಗೆ ಗಸ್ತು ಮಾಡುವರು.

1	ನಂಜನಗೂಡು	6	ದ್ಯಾವನೂರು
2	ಕಳಲೆ	7	ರಾಮಾಪುರ
3	ಹುರಾ	8	ತಾಯೂರು
4	ಯಡತಲೆ	9	ದಾಸನೂರು
5	ಹೊಟ್ಟೆನಾರು		

ಎಬ್ರಹ್ಯಾಮ್,
ದೇವಿ ಡಿ|| ಇನ್‌ಸ್ಪೆಕ್ಟರ್ ಮೈಸೂರು ಡಿ||

ಖಾಸಾಗಿ ಪ್ರಕಟನೆ.

ನೋಟೀಸ್.

ರೆವೆರೆಂಡ್ ಎ. ಮುಲ್ಲರ್. ಎಸ್. ಜೆ. ಇವರಿಂದ ರಚಿಸಲ್ಪಟ್ಟ ಹೋಮ್ಯೋಪೆತಿಕ್ ವೈದ್ಯ ಪುಸ್ತಕ—ಇಂಗ್ಲಿಷ್ ಪುಸ್ತಕಕ್ಕೆ ರೂಪಾಯಿ 1—8—0; 250 ಪುಟಗಳುಳ್ಳ ಕರ್ನಾಟಕ ಪುಸ್ತಕಕ್ಕೆ ರೂಪಾಯಿ 1; ಟಪ್ಪಾಲ್ ದಸ್ತೂರಿ ಕೂಡಿ—ಮಂಗಳೂರು ಸೈಂಟಲ್ ಲೋಯಿಸ್ಯೂಸ್ ಕಾಲೇಜಿನ ಬಡಜನರ ಹೋಮ್ಯೋಪೆತಿಕ್ ವೈದ್ಯಶಾಲೆಯ ಮೇನೇಜರರ ಕೂಡೆ ಅಪೇಕ್ಷಿಸಿದ್ದಲ್ಲಿ ಕಿಕ್ಕುವವು.